# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1091 (1136) |
| ಸದಸ್ಯರ ಹೆಸರು | : | ಶ್ರೀ ಸಿ. ಆರ್. ಮನೋಹರ್<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 17-03-2020 |
| ಉತ್ತರಿಸುವ ಸಚಿವರು | : | ಮಾನ್ಯ ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳು ಮೂಲಭೂತ ಸೌಕರ್ಯಗಳಿಂದ ವಂಚಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳ ವ್ಯಾಪ್ತಿಯಲ್ಲಿ ವಿವಿಧ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಹಲವಾರು ಯೋಜನೆಗಳನ್ನು ಜಾರಿಗೊಳಿಸುತ್ತಿವೆ. |
| ಆ) | ಹಾಗಿದ್ದಲ್ಲಿ, ಈ ಪುರಸಭೆಗೆ ಮೂಲಭೂತ ಸೌಲಭ್ಯಕಲ್ಪಿಸಲು ಸರ್ಕಾರಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು) | ಸರ್ಕಾರದ ಮಹತ್ವಾಕಾಂಕ್ಷೆ ಯೋಜನೆಗಳಾದ 14ನೇ ಹಣಕಾಸು ಆಯೋಗದ ಅನುದಾನ, 'ಅಮೃತ್', ಕಲ್ಮಷತಾಜ್ಯ ವಿಲೇವಾರಿ ಯೋಜನೆ, ಸ್ವಚ್ಛ ಭಾರತ್ ಅಭಿಯಾನ, ನಗರೋತ್ಥಾನ ಮತ್ತು ಎಸ್.ಎಫ್.ಸಿ ಯೋಜನೆಗಳಡಿ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮೂಲಭೂತ ಸೌಲಭ್ಯಕಲ್ಪಿಸಲುಕ್ರಮಕೈಗೊಳ್ಳಲಾಗುತ್ತಿದೆ.<br><br>**1. 14ನೇ ಹಣಕಾಸುಆಯೋಗದಅನುದಾನ:**<br>ಸದರಿ ಅನುದಾನದಡಿ ಈ ಕೆಳಕಂಡ ಮೂಲ ಸೌಕರ್ಯಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಮಾರ್ಗಸೂಚಿಯಲ್ಲಿ ಸೂಚಿಸಲಾಗಿದೆ.<br>1. ಕುಡಿಯುವ ನೀರು ಕಾಮಗಾರಿಗಳು (ವಂತಿಕೆ/contribution)<br>2. ಸಾಮೂಹಿಕ/ಸಾರ್ವಜನಿಕ ಶೌಚಾಲಯ ಮತ್ತು ಸೆಪ್ಟೇಜ್‌ಗಳ ನಿರ್ವಹಣೆ<br>3. ಒಳಚರಂಡಿ ವ್ಯವಸ್ಥೆ ಕಾಮಗಾರಿಗಳು<br>4. ಘನತ್ಯಾಜ್ಯ ವಸ್ತು ನಿರ್ವಹಣೆ<br>5. ಮಳೆ ನೀರುಚರಂಡಿ ಕಾಮಗಾರಿಗಳು<br>6. ಸಮುದಾಯ ಆಸ್ತಿಗಳ ನಿರ್ವಹಣೆ (ಪಾರ್ಕ್ ಒಳಗೊಂಡಂತೆ)<br>7. ರಸ್ತೆ ಮತ್ತು ಪಾದಾಚಾರಿ ಮಾರ್ಗಗಳ ನಿರ್ವಹಣೆ.<br>8. ವಿದ್ಯುತ್ ಬೀದಿ ದೀಪಗಳ ಅಳವಡಿಕೆ/ನಿರ್ವಹಣೆ /ವಿದ್ಯುತ್ ಉಳಿತಾಯದ ಕ್ರಮಗಳು (Public Private Partnership)<br>9. ಸ್ಮಶಾನ/ಚಿತಾಗಾರ/ಕಛೇರಿಗಳ ನಿರ್ವಹಣೆ<br><br>**2. ಅಮೃತ್‌ಯೋಜನೆ:**<br>ಕೋಲಾರಜಿಲ್ಲೆಯಲ್ಲಿಕೋಲಾರ ನಗರಸಭೆ ಮತ್ತು ರಾಬರ್ಟ್‌ಸನ್ಸ್ ಪೇಟೆ ನಗರಸಭೆಗಳು 'ಅಮೃತ್'ಯೋಜನೆಯಡಿ ಆಯ್ಕೆಯಾಗಿದ್ದು, ಸದರಿ ಅನುದಾನದಡಿ ಈ ಕೆಳಕಂಡ ಮೂಲ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಮಾರ್ಗಸೂಚಿಯಲ್ಲಿ ಸೂಚಿಸಲಾಗಿದೆ. |

1. ಕುಡಿಯುವ ನೀರು.
2. ಒಳಚರಂಡಿ.
3. ಮಳೆ ನೀರುಚರಂಡಿ.
4. ಹಸಿರು ಜಾಗ ಮತ್ತುಉದ್ಯಾನವನ
5. ನಗರ ಸಾರಿಗೆ (ಮೋಟರುರಹಿತ)

3. **ಸ್ವಚ್ಛ ಭಾರತ್‌ಯೋಜನೆಯಡಿ ಮೂಲಭೂತ ಸೌಲಭ್ಯಕಲ್ಪಿಸಲು ಈ ಕೆಳಕಂಡ ಕ್ರಮಗಳನ್ನು ತೆಗೆದು ಕೊಳ್ಳಲಾಗಿದೆ.**

- ವೈಯಕ್ತಿಕ ಶೌಚಾಲಯಗಳ ನಿರ್ಮಾಣಕ್ಕೆ ಸಂಬಂಧಿಸಿದಂತೆ ಸ್ವಚ್ಛ ಭಾರತ್ ಮಿಷನ್(ನಗರ) ಪೋರ್ಟಲ್‌ನಲ್ಲಿ ಅನುಮೋದನೆಗೊಂಡ ವೈಯಕ್ತಿಕ ಶೌಚಾಲಯಗಳ ಅರ್ಜಿಗಳ ಆಧಾರದ ಮೇಲೆ ಅನುದಾನವನ್ನು ಬಿಡುಗಡೆ ಮಾಡಲಾಗುತ್ತದೆ.

ಸಾರ್ವಜನಿಕ/ ಸಮುದಾಯ ಶೌಚಾಲಯಗಳ ನಿರ್ಮಾಣಕ್ಕೆ ಸಂಬಂಧಿಸಿದಂತೆ ಕ್ರಿಯಾ ಯೋಜನೆಗಳನ್ನು ಸಲ್ಲಿಸಿದ ಆಧಾರದ ಮೇಲೆ ಅನುದಾನವನ್ನು ಬಿಡುಗಡೆ ಮಾಡಲಾಗುತ್ತದೆ.

- ಘನತ್ಯಾಜ್ಯ ವಸ್ತು ನಿರ್ವಹಣೆಗೆ ಸಂಬಂಧಿಸಿದಂತೆ ನಗರಸ್ಥಳೀಯ ಸಂಸ್ಥೆಗಳಲ್ಲಿನ ತ್ಯಾಜ್ಯ ನಿರ್ವಹಣೆ ಪ್ರಸ್ತುತ ಸ್ಥಿತಿಗತಿ ಹಾಗೂ ಮುಂದಿನ 5 ವರ್ಷಗಳಿಗೆ ತ್ಯಾಜ್ಯ ನಿರ್ವಹಣೆಗೆ ಅಗತ್ಯವಿರುವ ಸಾಮರ್ಥ್ಯವನ್ನು ವಿಶ್ಲೇಷಿಸಿ ಯೋಜನಾ ವರದಿಗಳನ್ನು ಸಿದ್ಧಪಡಿಸಿ ಸರ್ಕಾರದ ಅನುಮೋದನೆ ನೀಡಲಾಗಿದ್ದು ಸದರಿ ಯೋಜನಾ ವರದಿಗಳ ಬಂಡವಾಳ ಮೊತ್ತದಕೇಂದ್ರ ಹಾಗೂ ರಾಜ್ಯದ ಪಾಲಿನ ಅನುದಾನವನ್ನು ಬಿಡುಗಡೆ ಮಾಡಲಾಗುತ್ತದೆ.

4. **ನಗರೋತ್ಥಾನಯೋಜನೆ:**
ನಗರೋತ್ಥಾನ ಯೋಜನೆಯಡಿಯಲ್ಲಿ ಈ ಕೆಳಕಂಡ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಮಾರ್ಗಸೂಚಿಯಲ್ಲಿ ಸೂಚಿಸಲಾಗಿದೆ. (1) ಕುಡಿಯುವ ನೀರಿನ ಕಾಮಗಾರಿಗಳು, (2) ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿ (3) ಮಳೆ ನೀರು ಅಭಿವೃದ್ಧಿ ಕಾಮಗಾರಿ (4) ಕಛೇರಿಕಟ್ಟಡ ಹಾಗೂ ಸಮುದಾಯ ಮತ್ತು ಸಾರ್ವಜನಿಕ ಶೌಚಾಲಯ ನಿರ್ಮಾಣ, ಆಧುನಿಕ ಬಸ್ ನಿಲ್ದಾಣ ನಿರ್ಮಾಣ, ಮಾರುಕಟ್ಟೆ ಸಂಕೀರ್ಣ ನಿರ್ಮಾಣ ಕಾಮಗಾರಿಗಳು.

5. **ರಾಜ್ಯ ಹಣಕಾಸುಆಯೋಗದಅನುದಾನ**
ಮೂಲಭೂತ ಸೌಲಭ್ಯಕಲ್ಪಿಸಲು ಸರ್ಕಾರವು ಎಸ್.ಎಫ್.ಸಿ. ಮುಕ್ತನಿಧಿ, ಎಸ್.ಎಫ್.ಸಿ ವಿಶೇಷ ಅನುದಾನ ಹಾಗೂ ಎಸ್.ಎಫ್.ಸಿ ಕುಡಿಯುವ ನೀರುಅನುದಾನವನ್ನು ಬಿಡುಗಡೆ ಮಾಡಲಾಗುತ್ತದೆ.

**ಎಸ್.ಎಫ್.ಸಿ. ಅನುದಾನದಡಿಯಲ್ಲಿಕೈಗೊಂಡಿರುವ ಕ್ರಮಗಳು:**
(1)ಕುಡಿಯುವ ನೀರು, (2) ತರಕಾರಿ ಮಾರುಕಟ್ಟೆ (3) ಮಾಂಸ, ಕೋಳಿ ಹಾಗೂ ಮೀನು ಮಾರುಕಟ್ಟೆ (4) ಸಣ್ಣ ಪ್ರಮಾಣದ ಮಾರುಕಟ್ಟೆ ನಿರ್ಮಾಣ (5)ಸಾರ್ವಜನಿಕ ಶೌಚಾಲಯಗಳ ನಿರ್ಮಾಣ ಮಾಡುವುದು (6)

ಸ್ಮಶಾನಅಭಿವೃದ್ಧಿ (7) ಆಂತರಿಕ ರಸ್ತೆಗಳ ಮತ್ತು ಚರಂಡಿಗಳ ನಿರ್ಮಾಣ ಮಾಡಲು ಕ್ರಮವಹಿಸಲಾಗುತ್ತಿದೆ.

ಇ) 2017-18 ರಿಂದ 2019-20ನೇ ಸಾಲಿನಲ್ಲಿ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳ ವಿಶೇಷ ಅಭಿವೃದ್ಧಿ (ಎಸ್.ಎಫ್.ಸಿ) ಹಾಗೂ ಇತರೆ ಯಾವುದೇ ಯೋಜನೆಯಡಿಯಲ್ಲಿ ಮಂಜೂರಾದ ಅನುದಾನವೆಷ್ಟು; (ಸಂಪೂರ್ಣ ವಿವರ ನೀಡುವುದು)

1. **14ನೇ ಹಣಕಾಸು ಆಯೋಗದ ಅನುದಾನ:**

14ನೇ ಹಣಕಾಸು ಆಯೋಗದ ಅನುದಾನದಡಿ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ಕಳೆದ 3 ವರ್ಷಗಳಲ್ಲಿ ಬಿಡುಗಡೆಗೊಳಿಸಿರುವ ಅನುದಾನದ ವಿವರ ಈ ಕೆಳಕಂಡಂತಿದೆ.

**ಕೋಲಾರಜಿಲ್ಲೆ:**

**(ರೂ.ಲಕ್ಷಗಳಲ್ಲಿ)**

| **ಕ್ರ.ಸಂ** | **ವರ್ಷ** | **ಹಂಚಿಕೆ** | **ಬಿಡುಗಡೆ** |
|---|---|---|---|
| 1 | 2017-18 | 2613.08 | 2613.08 |
| 2 | 2018-19 | 2264.00 | 2264.00 |
| 3 | 2019-20 | 3035.75 | 3035.75 |

**ಚಿಕ್ಕಬಳ್ಳಾಪುರ ಜಿಲ್ಲೆ:**

**(ರೂ.ಲಕ್ಷಗಳಲ್ಲಿ)**

| **ಕ್ರ.ಸಂ** | **ವರ್ಷ** | **ಹಂಚಿಕೆ** | **ಬಿಡುಗಡೆ** |
|---|---|---|---|
| 1 | 2017-18 | 1338.79 | 1338.79 |
| 2 | 2018-19 | 1420.00 | 1420.00 |
| 3 | 2019-20 | 1904.10 | 1904.10 |

2. **ಅಮೃತ್‌ಯೋಜನೆ:**

ಕೋಲಾರ ನಗರಕ್ಕೆ ಸದರಿ ಯೋಜನೆಯಡಿ ಒಟ್ಟು ಅನುದಾನ ರೂ.138.45ಕೋಟಿಗಳು ಹಂಚಿಕೆಯಾಗಿದ್ದು, ಈ ಕೆಳಕಂಡ ವಲಯಗಳಲ್ಲಿ ಕಾಮಗಾರಿಗಳನ್ನು ಕೈಗೊಂಡು ಅನುಷ್ಠಾನಗೊಳಿಸಲಾಗುತ್ತಿದೆ.

ಕೋಲಾರ ನಗರಸಭೆ

(ರೂ. ಕೋಟಿಗಳಲ್ಲಿ)

| **ಕ್ರ. ಸಂ** | **ವಲಯ** | **ಕಾಮಗಾರಿಗಳ ಸಂಖ್ಯೆ** | **ಕಾಮಗಾರಿ ಯೋಜನಾ ಮೊತ್ತ** | **ವೆಚ್ಚ** |
|---|---|---|---|---|
| 1 | ನೀರು ಸರಬರಾಜು | 2 | 17.23 | 13.5 |
| 2 | ಒಳಚರಂಡಿ | 1 | 73.00 | 40.17 |
| 3 | ಮಳೆ ನೀರುಚರಂಡಿ | 19 | 40.07 | 14.22 |
| 4 | ಹಸಿರು ಜಾಗ ಮತ್ತುಉದ್ಯಾನವನ | 12 | 7.75 | 2.76 |
| 5 | ನಗರ ಸಾರಿಗೆ | 1 | 0.4 | 0 |
| **ಒಟ್ಟು:** | | **35** | **138.45** | **70.65** |

ರಾಬರ್ಟ್‌ಸನ್ಸ್ ಪೇಟೆ ನಗರಕ್ಕೆ ಯೋಜನೆಯಡಿ ಒಟ್ಟು ಅನುದಾನ ರೂ.145.26 ಕೋಟಿಗಳು ಹಂಚಿಕೆಯಾಗಿದ್ದು, ಈ ಕೆಳಕಂಡ

ವಲಯಗಳಲ್ಲಿ ಕಾಮಗಾರಿಗಳನ್ನು ಕೈಗೊಂಡು ಅನುಷ್ಠಾನಗೊಳಸಲಾಗುತ್ತಿದೆ.

**ರಾಬರ್ಟ್‌ಸನ್ಸ್ ಪೇಟೆ ನಗರಸಭೆ**

(ರೂ. ಕೋಟಿಗಳಲ್ಲಿ)

| ಕ್ರ. ಸಂ | ವಲಯ | ಕಾಮಗಾರಿಗಳ ಸಂಖ್ಯೆ | ಕಾಮಗಾರಿ ಯೋಜನಾ ಮೊತ್ತ | ವೆಚ್ಚ |
|---|---|---|---|---|
| 1 | ನೀರು ಸರಬರಾಜು | 2 | 66.41 | 36.68 |
| 2 | ಒಳಚರಂಡಿ | 3 | 44.66 | 28.97 |
| 3 | ಮಳೆ ನೀರುಚರಂಡಿ | 11 | 23.00 | 15.58 |
| 4 | ಹಸಿರು ಜಾಗ ಮತ್ತುಉದ್ಯಾನವನ | 10 | 3.19 | 0.91 |
| 5 | ನಗರ ಸಾರಿಗೆ | 8 | 8 | 0.98 |
| **ಒಟ್ಟು:** | | **34** | **145.26** | **83.12** |

3. **ಸ್ವಚ್ಛ ಭಾರತ್‌ಯೋಜನೆಯಡಿ**2017-18 ರಿಂದ 2019-20ನೇ ಸಾಲಿಗೆ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗೆ ಮಂಜೂರು ಮತ್ತು ಬಿಡುಗಡೆ ಮಾಡಲಾದ ಅನುದಾನದ ವಿವರ ಈ ಕೆಳಕಂಡಂತಿದೆ:

**ರೂ ಲಕ್ಷಗಳಲ್ಲಿ**

| ಜಿಲ್ಲೆಯ ಹೆಸರು | ಮಂಜೂರು ಮಾಡಲಾದ ಅನುದಾನ | ಬಿಡುಗಡೆ ಮಾಡಲಾದ ಅನುದಾನ |
|---|---|---|
| ಕೋಲಾರ | 3146.36 | 1410.90 |
| ಚಿಕ್ಕಬಳ್ಳಾಪುರ | 2914.35 | 710.50 |
| **ಒಟ್ಟು** | **6060.71** | **2121.40** |

4. **ನಗರೋತ್ಥಾನಯೋಜನೆ:**

**ನಗರೋತ್ಥಾನ (ಮುನಿಸಿಪಾಲಿಟಿ) ಹಂತ-3 ರಯೋಜನೆಯಡಿ** ಕೋಲಾರ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಿಗೆ ಒಟ್ಟುರೂ. 11750.00 ಲಕ್ಷಗಳು ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಿಗೆ ಒಟ್ಟುರೂ. 11950.00 ಲಕ್ಷಗಳು ಮಂಜೂರಾಗಿರುತ್ತದೆ.

- **ರೂ. 50.00 ಕೋಟಿಗಳ ನಗರೋತ್ಥಾನ ವಿಶೇಷ ಅನುದಾನ** ಯೋಜನೆಯಡಿಯಲ್ಲಿ ಚಿಕ್ಕಬಳ್ಳಾಪುರ ನಗರಸಭೆಗೆ ರೂ.50.00ಕೋಟಿಗಳು ಮಂಜೂರಾಗಿರುತ್ತದೆ.

5. **ರಾಜ್ಯ ಹಣಕಾಸುಆಯೋಗ:**

ಕೋಲಾರ/ ಚಿಕ್ಕಬಳ್ಳಾಪುರ ಜಿಲ್ಲೆಗೆ 2017-18 ರಿಂದ 2019-20ನೇ ಸಾಲಿಗೆ ರಾಜ್ಯ ಹಣಕಾಸು ಆಯೋಗದಡಿ ಬಿಡುಗಡೆಯಾದ ಅನುದಾನದ ವಿವರ ಈ ಕೆಳಕಂಡಂತಿದೆ.

**ಕೋಲಾರಜಿಲ್ಲೆ :-**

ಎಸ್.ಎಫ್.ಸಿ ಮುಕ್ತನಿಧಿ ಅನುದಾನ: (ರೂ ಲಕ್ಷಗಳಲ್ಲಿ)

| ವರ್ಷ | ಹಂಚಿಕೆ | ಬಿಡುಗಡೆ |
|---|---|---|
| 2017-18 | 2148.13 | 1741.8 |
| 2018-19 | 2041.31 | 1539.00 |
| 2019-20 | 1750.00 | 1209.21 |

ಎಸ್.ಎಫ್.ಸಿಕುಡಿಯುವ ನೀರುಅನುದಾನ: (ರೂ ಲಕ್ಷಗಳಲ್ಲಿ)

| ವರ್ಷ | ಹಂಚಿಕೆ | ಬಿಡುಗಡೆ |
|---|---|---|
| 2017-18 | 1107.2 | 1107.2 |
| 2018-19 | 392.9 | 392.9 |
| 2019-20 | 108.72 | 108.72 |

ಎಸ್.ಎಫ್.ಸಿ ವಿಶೇಷ ಅನುದಾನ : (ರೂ ಲಕ್ಷಗಳಲ್ಲಿ)

| ವರ್ಷ | ಹಂಚಿಕೆ | ಬಿಡುಗಡೆ |
|---|---|---|
| 2017-18 | 420.00 | 291.00 |
| 2018-19 | 1400.00 | 0.00 |
| 2019-20 | 500.00 | 0.00 |

**ಚಿಕ್ಕಬಳ್ಳಾಪುರ ಜಿಲ್ಲೆ : -**

ಎಸ್.ಎಫ್.ಸಿ ಮುಕ್ತನಿಧಿ ಅನುದಾನ: (ರೂ ಲಕ್ಷಗಳಲ್ಲಿ)

| ವರ್ಷ | ಹಂಚಿಕೆ | ಬಿಡುಗಡೆ |
|---|---|---|
| 2017-18 | 1254.89 | 1020.34 |
| 2018-19 | 1280.51 | 961.69 |
| 2019-20 | 1098.00 | 585.99 |

ಎಸ್.ಎಫ್.ಸಿ ಕುಡಿಯುವ ನೀರುಅನುದಾನ: (ರೂ ಲಕ್ಷಗಳಲ್ಲಿ)

| ವರ್ಷ | ಹಂಚಿಕೆ | ಬಿಡುಗಡೆ |
|---|---|---|
| 2017-18 | 819.51 | 819.51 |
| 2018-19 | 250.00 | 250.00 |
| 2019-20 | 108.00 | 108.00 |

ಎಸ್.ಎಫ್.ಸಿ ವಿಶೇಷ ಅನುದಾನ :(ರೂ ಲಕ್ಷಗಳಲ್ಲಿ)

| ವರ್ಷ | ಹಂಚಿಕೆ | ಬಿಡುಗಡೆ |
|---|---|---|
| 2017-18 | - | - |
| 2018-19 | 300.00 | 0.00 |
| 2019-20 | 300.00 | 0.00 |

| | | |
|---|---|---|
| ಈ) | ಮಂಜೂರಾಗಿರುವ ಅನುದಾನದಲ್ಲಿ ಬಿಡುಗಡೆ ಮಾಡಿರುವ ಅನುದಾನವೆಷ್ಟು, ತಡೆ ಹಿಡಿದಿರುವ | ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗೆ ಮಂಜೂರಾಗಿರುವ ಅನುದಾನದಲ್ಲಿ ಬಿಡುಗಡೆ ಮಾಡಿರುವ ಅನುದಾನದ ವಿವರವನ್ನು ಕ್ರಮ ಸಂಖ್ಯೆ (ಇ)ರಲ್ಲಿ ಉತ್ತರಿಸಲಾಗಿದೆ. |

| | | |
|---|---|---|
| | ಅನುದಾನವೆಷ್ಟು. (ಸಂಪೂರ್ಣ ವಿವರ ನೀಡುವುದು) | **ಎಸ್.ಎಫ್.ಸಿ ವಿಶೇಷ ಅನುದಾನ:** ಕೋಲಾರ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಿಗೆ ಮಂಜೂರಾಗಿದ್ದ ಎಸ್.ಎಫ್.ಸಿ ವಿಶೇಷ ಅನುದಾನದಲ್ಲಿ ತಡೆಹಿಡಿಹಿಡಿದಿರುವ ಅನುದಾನದ ಮೊತ್ತ ರೂ.5000.00 ಲಕ್ಷಗಳು ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಯ ಸ್ಥಳೀಯ ಸಂಸ್ಥೆಗಳಿಗೆ ರೂ.3000.00 ಲಕ್ಷಗಳಾಗಿರುತ್ತದೆ. (ಆದೇಶದ ಪ್ರತಿಯನ್ನು ಅನುಬಂಧ-1ರಲ್ಲಿ ಲಗತ್ತಿಸಿದೆ) |
| ಉ) | ಅನುದಾನವನ್ನು ತಡೆಹಿಡಿದಿರುವುದರಿಂದ ಪುರಸಭೆಯು ಮೂಲಭೂತ ಸೌಲಭ್ಯಗಳಿಂದ ಕುಂಠಿತವಾಗುವುದಿಲ್ಲವೇ; ತಡೆ ಹಿಡಿದಿರುವ ಅನುದಾನವನ್ನು ಯಾವ ಕಾಲಮಿತಿಯಲ್ಲಿ ಬಿಡುಗಡೆ ಮಾಡಲಾಗುವುದು? (ಪೂರ್ಣ ಮಾಹಿತಿ ನೀಡುವುದು) | ಸರ್ಕಾರವು ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ವಿವಿಧ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಎಸ್.ಎಫ್.ಸಿ ಮುಕ್ತನಿಧಿ ಅನುದಾನ, ಎಸ್.ಎಫ್.ಸಿ ಕುಡಿಯುವ ನೀರುಅನುದಾನ, 14ನೇ ಹಣಕಾಸು ಆಯೋಗ ಅನುದಾನ, ನಗರೋತ್ಥಾನ ಯೋಜನೆ ಹಾಗೂ ಸ್ವಚ್ಛ ಭಾರತ ಮಿಷನ್ ಯೋಜನೆಗಳಡಿ ಅನುದಾನಗಳನ್ನು ಬಿಡುಗಡೆಗೊಳಿಸುತ್ತದೆ.<br><br>ಆರ್ಥಿಕ ಇಲಾಖೆಯು ಸಹಮತಿ ನೀಡಿದಲ್ಲಿ ತಡೆಹಿಡಿಯಲಾಗಿರುವ ಅನುದಾನವನ್ನು ಮರು ಮಂಜೂರು ಮಾಡಲು ಕ್ರಮವಹಿಸಲಾಗುತ್ತದೆ. |

ಕಡತ ಸಂಖ್ಯೆ: ನಅಇ 107 ಎಸ್.ಎಫ್.ಸಿ 2020

(ನಾರಾಯಣ ಗೌಡ)
ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು
ರೇಷ್ಮೆ ಸಚಿವರು

Annexure - A1

ಕರ್ನಾಟಕ ಸರ್ಕಾರ

ಸಂಖ್ಯೆ:ನಅಇ 129 ಎಸ್‌ಎಫ್ ಸಿ 2019

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ:06-08-2019.

635487

ಇವರಿಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ,
ಬೆಂಗಳೂರು.

ಇವರಿಗೆ,
ನಿರ್ದೇಶಕರು,
ಪೌರಾಡಳಿತ ನಿರ್ದೇಶನಾಲಯ,
ಬೆಂಗಳೂರು.

ಮಾನ್ಯರೇ,

**ವಿಷಯ:** 2019-20ನೇ ಸಾಲಿನಲ್ಲಿ ನಗರ ಸ್ಥಳೀಯ ಸಂಸ್ಥೆಗಳಿಗೆ ಮಂಜೂರು ಮಾಡಿರುವ ಎಸ್.ಎಫ್.ಸಿ ವಿಶೇಷ ಅನುದಾನವನ್ನು ತಡೆ ಹಿಡಿಯುವ ಬಗ್ಗೆ.

*****

Directorate of Municipal Adm
No............
Comm
07 AUG 2019
AD. Admin

2019-20ನೇ ಸಾಲಿನ ಜುಲೈ ಮಾಹೆಯಲ್ಲಿ ಅನುಮೋದನೆಗೊಂಡಿರುವ ಎಲ್ಲಾ ಹೊಸ ಕಾಮಗಾರಿಗಳಿಗೆ ಸಂಬಂಧಿಸಿದ ಆದೇಶಗಳನ್ನು ತಕ್ಷಣವೇ ಮುಂದಿನ ಆದೇಶದವರೆಗೆ ತಡೆ ಹಿಡಿಯುವಂತೆ ಆರ್ಥಿಕ ಇಲಾಖೆಯು ತಿಳಿಸಿರುವುದರಿಂದ ನಗರಾಭಿವೃದ್ಧಿ ಇಲಾಖೆಯು ಈ ಕೆಳಕಂಡ ನಗರ ಸ್ಥಳೀಯ ಸಂಸ್ಥೆಗಳಿಗೆ ಮಂಜೂರು ಮಾಡಿರುವ ಎಸ್.ಎಫ್.ಸಿ ವಿಶೇಷ ಅನುದಾನವನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ತಡೆ ಹಿಡಿಯಲಾಗಿದೆ.

(ರೂ.ಲಕ್ಷಗಳಲ್ಲಿ)

| ಕ್ರ. ಸಂ. | ನಗರ ಸ್ಥಳೀಯ ಸಂಸ್ಥೆ ಹೆಸರು | ಉದ್ದೇಶ | ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ | ಸರ್ಕಾರವು ಅನುಮೋದನೆ ನೀಡಿರುವ ಆದೇಶ / ಪತ್ರ | ಅನುಮೋದನೆ ನೀಡಿರುವ ಮೊತ್ತ |
|---|---|---|---|---|---|
| | 1 | 2 | 3 | 4 | 5 |
| 1. | ಶ್ರೀನಿವಾಸ ಪುರ ಪುರಸಭೆ | ಶ್ರೀನಿವಾಸ ಪುರ ಪುರಸಭೆ ವ್ಯಾಪ್ತಿಯ ಎಲ್ಲಾ ವಾರ್ಡ್‌ಗಳಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು | ಆಇ 559 ವೆಚ್ಚ-9/2019, ದಿ:17-07-2019 | ನಅಇ 132 ಎಸ್‌ಎಫ್‌ಸಿ 2019 (ಭಾಗ-1), ದಿ: 20-07-2019. | 1000.00 |
| 2. | ಹೊಳೆನರಸೀಪುರ ಪುರಸಭೆ | ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು | ಆಇ 92 ವೆಚ್ಚ-9/2019, ದಿ:24-07-2019 | ನಅಇ 01 ಎಸ್‌ಎಫ್‌ಸಿ 2019, ದಿ: 25-07-2019. | 1000.00 |

---2

| | | | | | |
|---|---|---|---|---|---|
| 3. | ದಾಂಡೇಲಿ ನಗರಸಭೆ | ದಾಂಡೇಲಿ ನಗರಸಭೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು | ಆಇ 595 ವೆಚ್ಚ-9/2019, ದಿ:19-07-2019 & ಇ ಸಂಖ್ಯೆ: ಆಇ 101 ವೆಚ್ಚ-9/2019, ದಿ:30-07-2019 | ನಅಇ 154 ಎಸ್‌ಎಫ್‌ಸಿ 2019, ದಿ: 20-07-2019. | 1000.00 |
| 4. | ಕುಮಟಾ ಪುರಸಭೆ | ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳು | ಆಇ 524 ವೆಚ್ಚ-9/2019, ದಿ:01-07-2019. | ಇ ನಅಇ 132 ಎಸ್‌ಎಫ್‌ಸಿ 2019. ದಿ:02-07-2019 | 300.00 |
| 5. | ಹೊನ್ನಾವರ ಪಟ್ಟಣ ಪಂಚಾಯ್ತಿ | ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳು | ಆಇ 524 ವೆಚ್ಚ-9/2019, ದಿ:01-07-2019. | ಇ ನಅಇ 132 ಎಸ್‌ಎಫ್‌ಸಿ 2019. ದಿ:02-07-2019 | 200.00 |
| 6. | ಅಥಣಿ ಪುರಸಭೆ | ಬೆಳಗಾವಿ ಜಿಲ್ಲೆಯ ಅಥಣಿ ಪುರಸಭೆ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು | ಆಇ 785 ವೆಚ್ಚ-9/2018, ದಿ:17-07-2019 | ನಅಇ 174 ಎಸ್‌ಎಫ್‌ಸಿ 2019, ದಿ: 24-07-2019. | 100.00 |
| 7. | ಕಂಪ್ಲಿ ಪುರಸಭೆ | ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳು | ಆಇ 785 ವೆಚ್ಚ-9/2018. ದಿನಾಂಕ:17-07-2019 | ನಅಇ 173 ಎಸ್‌ಎಫ್‌ಸಿ 2019, ದಿ: 23-07-2019. | 250.00 |
| 8. | ಕುರುಗೋಡು ಪುರಸಭೆ | ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳು | ಆಇ 785 ವೆಚ್ಚ-9/2018, ದಿ:17-07-2019 | ನಅಇ 173 ಎಸ್‌ಎಫ್‌ಸಿ 2019, ದಿನಾಂಕ: 23-07-2019. | 250.00 |
| | ಒಟ್ಟು | | | | **4100.00** |

ಮೇಲ್ಕಂಡ ಪಟ್ಟಿಯ ಕಲಂ. 4 ರಲ್ಲಿ ತಿಳಿಸಿರುವ ಪತ್ರಗಳನ್ವಯ ಮಂಜೂರು ಮಾಡಲಾಗಿರುವ ಅನುದಾನದಡಿ ಮುಂದಿನ ಆದೇಶದವರೆಗೆ ಯಾವುದೇ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಬಾರದೆಂದು ತಮಗೆ ತಿಳಿಸಲು ನಾನು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

10/03/2020

(ಲಲಿತಾಬಾಯಿ ಕೆ.)
ಸರ್ಕಾರದ ಅಧೀನ ಕಾರ್ಯದರ್ಶಿಗಳು
ನಗರಾಭಿವೃದ್ಧಿ ಇಲಾಖೆ.

ಪ್ರತಿ ಅಗತ್ಯ ಕ್ರಮಕ್ಕಾಗಿ:

1. ಮುಖ್ಯಾಧಿಕಾರಿಗಳು, ಶ್ರೀನಿವಾಸ ಪುರ ಪುರಸಭೆ, ಕೋಲಾರ ಜಿಲ್ಲೆ, ಕೋಲಾರ.
2. ಮುಖ್ಯಾಧಿಕಾರಿಗಳು, ಹೊಳೆನರಸೀಪುರ ಪುರಸಭೆ, ಹಾಸನ ಜಿಲ್ಲೆ, ಹಾಸನ
3. ಪೌರಾಯುಕ್ತರು, ದಾಂಡೇಲಿ ನಗರಸಭೆ, ಉತ್ತರಕನ್ನಡ ಜಿಲ್ಲೆ, ಕಾರವಾರ.
4. ಮುಖ್ಯಾಧಿಕಾರಿಗಳು, ಕುಮಟಾ ಪುರಸಭೆ, ಉತ್ತರಕನ್ನಡ ಜಿಲ್ಲೆ.
5. ಮುಖ್ಯಾಧಿಕಾರಿಗಳು, ಹೊನ್ನಾವರ ಪಟ್ಟಣ ಪಂಚಾಯ್ತಿ, ಉತ್ತರಕನ್ನಡ ಜಿಲ್ಲೆ,
6. ಮುಖ್ಯಾಧಿಕಾರಿಗಳು, ಅಥಣಿ ಪುರಸಭೆ ಬೆಳಗಾವಿ ಜಿಲ್ಲೆ, ಬೆಳಗಾವಿ.
7. ಮುಖ್ಯಾಧಿಕಾರಿಗಳು, ಕಂಪ್ಲಿ ಪುರಸಭೆ, ಬಳ್ಳಾರಿ ಜಿಲ್ಲೆ, ಬಳ್ಳಾರಿ.
8. ಮುಖ್ಯಾಧಿಕಾರಿಗಳು, ಕುರುಗೋಡು ಪುರಸಭೆ, ಬಳ್ಳಾರಿ ಜಿಲ್ಲೆ, ಬಳ್ಳಾರಿ.